# ಕೃಷ್ಣ ಜನ್ಮಾಷ್ಟಮಿ

(6ನೇ ಪುಟದಿಂದ)

ಶ್ರೀಕೃಷ್ಣನು ದೇವಕಿ– ವಸುದೇವರಿಗೆ 8ನೇ ಮಗುವಾಗಿ ದ್ವಾರಕೆಯಲ್ಲಿ ಹುಟ್ಟಿದ. ಆಗಿನಿಂದ 'ದ್ವಾಪರ ಯುಗ' ಪ್ರಾರಂಭ ಆಯಿತು. ಅವನ ಬಗ್ಗೆ ಹಾಡನ್ನು ಹಾಡದೇ ಇರುವ ಗಾಯಕರೇ ಇಲ್ಲ. ಕೃಷ್ಣನ ಬಗ್ಗೆ ಇರುವಷ್ಟು ಹಾಡುಗಳು ಪ್ರಾಯಶಃ ಬೇರಾವ ದೇವರ ಮೇಲೂ ಇಲ್ಲ. ಕೃಷ್ಣ ಜನ್ಮಾಷ್ಟಮಿಯನ್ನು ಭಾರತದ ವಿವಿಧೆಡೆ ವಿಭಿನ್ನವಾಗಿ ಆಚರಿಸುತ್ತಾರೆ. ಶ್ರೀವೈಷ್ಣವರು ಇದನ್ನು ಒಂದು ವ್ರತವನ್ನಾಗಿ ಬಹು ವಿಜೃಂಭಣೆಯಿಂದ ಆಚರಿಸುತ್ತಾರೆ. ಹಣ್ಣು–ತಿಂಡಿಗಳಿಂದ ಅಲಂಕರಿಸಿದ ಮಂಟಪದಲ್ಲಿ ಶ್ರೀಕೃಷ್ಣನ ವಿಗ್ರಹ ಅಥವಾ ಫೋಟೋ ಇಟ್ಟು ಭಕ್ತಿಯಿಂದ ಪೂಜಿಸುತ್ತಾರೆ. ಕೃಷ್ಣನು ರಾತ್ರಿ ಹುಟ್ಟಿದ ಕಾರಣ ರಾತ್ರಿವರೆಗೂ ಉಪವಾಸವಿದ್ದು ನಂತರ ಪೂಜೆ ಮಾಡುತ್ತಾರೆ. ಬಾಲಕೃಷ್ಣನ ಹೆಜ್ಜೆಯ ಗುರುತನ್ನು ಮನೆ ಬಾಗಿಲಿನಿಂದ ಪೂಜಾ ಮಂಟಪದವರೆಗೂ ಅಕ್ಕಿಹಿಟ್ಟಿನ ರಂಗವಲ್ಲಿಯಲ್ಲಿ ಬಿಡಿಸುತ್ತಾರೆ. ಬಾಲಕೃಷ್ಣನು ಬಂದು ಪೂಜೆಯಲ್ಲಿ ಪಾಲ್ಗೊಂಡು ಬೆಣ್ಣೆ, ಮೊಸರು, ತಿಂಡಿಗಳು ಮೊದಲಾದವನ್ನು ಸ್ವೀಕರಿಸುತ್ತಾನೆಂಬ ನಂಬಿಕೆ ಇದೆ. ಆದ್ದರಿಂದ ಅಂದು ಬಹಳ ತಿಂಡಿಗಳನ್ನು ಮಾಡುತ್ತಾರೆ. ಈ ದಿನ ಬಾಲಕೃಷ್ಣನಿಗೆ ಪ್ರಿಯವಾದ ಅವಲಕ್ಕಿ, ಹಾಲು, ಮೊಸರು ಮತ್ತು ಬೆಣ್ಣೆಯಿಂದ ತಿಂಡಿಗಳನ್ನು ಮಾಡುತ್ತಾರೆ. ಕೆಲವರು 'ಅಂಬೆಗಾಲು ಕೃಷ್ಣ'ನನ್ನು ತೊಟ್ಟಿಲಲ್ಲಿಟ್ಟು ಪೂಜಿಸುತ್ತಾರೆ.

ಮಹಾರಾಷ್ಟ್ರದಲ್ಲಿ ಈ ಹಬ್ಬವನ್ನು ಇನ್ನಷ್ಟು ಭಿನ್ನವಾಗಿ ಆಚರಿಸುತ್ತಾರೆ. ಒಂದು ಮಡಿಕೆಯಲ್ಲಿ ಸಿಹಿ ತಿಂಡಿ, ಹಣ ಮುಂತಾದವನ್ನು ಇಟ್ಟು ಅತ್ಯಂತ ಎತ್ತರದ ಎರಡು ಕಟ್ಟಡಗಳ ಮಧ್ಯೆ ತೂಗು ಹಾಕುತ್ತಾರೆ. ಯುವಕರು ಒಬ್ಬರ ಮೇಲೆ ಒಬ್ಬರು ಹತ್ತಿ ಪಿರಮಿಡ್ ರಚಿಸಿ ಮಡಕೆಯನ್ನು ಒಡೆದು ಅದರಲ್ಲಿರುವುದನ್ನು ಹಂಚಿಕೊಳ್ಳುತ್ತಾರೆ. ಅವರನ್ನು ತಡೆಯಲು ಜನರು ಕಟ್ಟಡಗಳಿಂದ ನೀರನ್ನು ಸುರಿಯುತ್ತಿರುತ್ತಾರೆ. ಆದರೂ ಬಿಡದೆ ಯುವಕರು ಸಾಹಸದಿಂದ ಮಡಿಕೆ ಒಡೆಯುತ್ತಾರೆ. ಮಹಾರಾಷ್ಟ್ರದ ಈ 'ದಹಿಹಾಂಡಿ' ಆಚರಣೆ ಕರ್ನಾಟಕ ಸಹಿತ ಇತರೆಡೆಗಳಲ್ಲೂ ಈಗ ಜನಪ್ರಿಯ.

ಶಿವ ರೌದ್ರತೆಯ ರುದ್ರನಾದರೆ, ಶ್ರೀರಾಮ ಗಂಭೀರವದನದ ಮರ್ಯಾದಾ ಪುರುಷೋತ್ತಮ. ಆದರೆ ಶ್ರೀಕೃಷ್ಣ ಮಂದಸ್ಮಿತ ಮತ್ತು ಜನಪ್ರಿಯ ಜನಾರ್ದನ. ಶ್ರೀಕೃಷ್ಣನ ಕಾಳಿಂಗ ಮರ್ದನ' ಅವನು ಒಬ್ಬ ನೃತ್ಯ ಪಟು ಎಂದು ತೋರಿಸುತ್ತದೆ. ಅವನು ತನ್ನ ಮಧುರವಾದ ವೇಣುಗಾನದಿಂದ ಪಶು–ಪಕ್ಷಿ ಮತ್ತು ಗೋಪಿಯರನ್ನು ಆಕರ್ಷಿಸುತ್ತಿದುದ್ದರಿಂದ ಅವನು ಒಳ್ಳೆಯ ಸಂಗೀತಗಾರನೆಂದು ಸಾಬೀತಾಗುತ್ತದೆ.  ಇದಲ್ಲದೇ ಅವನು ಗೋಪಿಯರೊಡನೆ ಆಡಿದ 'ರಾಸಲೀಲೆ' ಅವನ ಕಲಾರಸಿಕತೆಯನ್ನು ಪ್ರದರ್ಶಿಸುತ್ತದೆ. ತುಂಟ ಮಗುವಾಗಿ, ಸುಂದರ ಯುವಕನಾಗಿ, ದಕ್ಷ ರಾಜಕಾರಣಿಯಾಗಿ, ಜನಪ್ರಿಯ ರಾಜನಾಗಿ, ಒಳ್ಳೆಯ ಸ್ನೇಹಿತನಾಗಿ, ಪ್ರೀತಿಯ ಪತಿಯಾಗಿ, ಪ್ರಿಯಕರನಾಗಿ ತನ್ನ ಜೀವನದಲ್ಲಿ ಅನೇಕ ಪಾತ್ರ ವಹಿಸಿದಾತ ಶ್ರೀಕೃಷ್ಣ. ಭಾರತೀಯರು ಮಕ್ಕಳಲ್ಲಿ ಕೃಷ್ಣನನ್ನು ಕಾಣುತ್ತಾರೆ. ತಮಿಳರಂತೂ ಮಕ್ಕಳನ್ನು 'ಕಣ್ಣ' ಎಂದೇ ಕರೆಯುತ್ತಾರೆ.

ಈ ಹಬ್ಬದ ಆಚರಣೆಯ ಮುಖ್ಯ ಉದ್ದೇಶ– ಭಗವಂತನನ್ನು ಶ್ರದ್ಧಾಭಕ್ತಿಯಿಂದ ಪೂಜಿಸಿ 'ಇಹ' ಹಾಗೂ 'ಪರ'ದಲ್ಲಿ ಮುಕ್ತಿಯನ್ನು ಕೊಡು ಎಂದು ಕೇಳಿಕೊಳ್ಳುವುದು. ಈ ದಿನ ಭಕ್ತರು ಮಕ್ಕಳಲ್ಲಿ ಕೃಷ್ಣನನ್ನು ಕಾಣುತ್ತಾರೆ. ಅವರಿಗೆ ವಿವಿಧ ತಿಂಡಿಗಳನ್ನು ಕೊಟ್ಟು ತಿನ್ನುವುದನ್ನು ನೋಡಿ ಸಂತೋಷ ಪಡುತ್ತಾರೆ. ಬೇರೆ ಪದಗಳಲ್ಲಿ ಹೇಳುವುದಾದರೆ, ಕೃಷ್ಣನ ಸುಧಾಮ ಪ್ರೀತಿ, ರಾಧೆಯ ಮೇಲಿನ ಪ್ರೇಮ, ಅರ್ಜುನನೊಂದಿಗಿನ ಸಖ್ಯ, ದ್ರೌಪತಿಯ ಭಾತೃತ್ವ ಇವೆಲ್ಲವೂ ವಿಶಿಷ್ಟವೇ. ಮಥುರೆಯ ಸ್ತ್ರೀಯರಿಗೆ ಶ್ರೀಕೃಷ್ಣ 'ಗೋಪಿವಲ್ಲಭ.' ಈ ದಿನ ಇಲ್ಲಿ ಬಹಳ ವೈಭವದಿಂದ ಉತ್ಸವ ನಡೆಯುತ್ತದೆ. ಅವಲಕ್ಕಿ ಅವನ ನೆಚ್ಚಿನ ತಿಂಡಿ. ಕೆಲವರು 16 ಬಗೆಯ ತಿಂಡಿಗಳನ್ನು ಮಾಡುತ್ತಾರೆ. ಸಂಸ್ಕೃತದ 'ಕರ್ಷ' ಎಂಬ ಪದದಿಂದ ಕೃಷ್ಣ ಎಂಬ ಪದ ಬಂದಿರಬಹುದು. 'ಕೃಷ್ಣ' ಎಂದರೆ ಆಕರ್ಷಣೆ ಎಂದು ಅರ್ಥ. ರುಕ್ಮಿಣಿ, ಜಾಂಬವತಿ, ಸತ್ಯಭಾಮ, ಕಾಳಿಂದಿ, ಮಿತ್ರವಿಂದ, ಸತ್ಯಾ, ಭದ್ರಾ ಮತ್ತು ನಾಗ್ನಜಿತೀ– ಇವನ ಅಷ್ಟ ಮಹಿಷಿಯರು. ಉದ್ಧವ ಶ್ರೀಕೃಷ್ಣನ ಆಪ್ತಮಿತ್ರ, ಅಂತರಂಗದ ಭಕ್ತ.





